ಓ ಎಸ್ ನಂ 209/2016

**ಪಿ. ಡಬ್ಲ್ಯೂ ಃ 1**

**ದಿಃ 26.09.2024 ರಂದು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಮತಿ ಆರ್ ವಿ ವಕೀಲರಿಂದ**

2 ರಿಲೀಸ್ ಡಿಡ್ ಗಳ ನೋಂದಾಯಿತ ದೃಢೀಕೃತ ನಕಲುಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 43 ರಿಂದ 45 ಎಂದು, ಕ್ರಯಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 46 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ 7 ರವರ ಪರ ಶ್ರೀ ಕೆ ಎನ್ ಡಿ ವಕೀಲರಿಂದ ಃ**

ದಾವಾ ಬಿ ಸ್ವತ್ತು 3 ಪೋಡಿಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 43/1 ಎ ರಲ್ಲಿ 3 ಎಕರೆ 1 ಗುಂಟೆ ಇರುತ್ತದೆ ಎಂದರೆ ಸರಿ. ಸ.ನಂ. 43/1 ಬಿ ರಲ್ಲಿ 1 ಎಕರೆ 38 ಗುಂಟೆ ಇರುತ್ತದೆ ಎಂದರೆ ಸರಿ. ಸ.ನಂ. 43/2 ರಲ್ಲಿ 1 ಎಕರೆ 24 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಕೀಲರು ಸದರಿ ಸ.ನಂಬರ್ ಗಳಲ್ಲಿ ಎಷ್ಟು ಜಮೀನು ಇರುತ್ತದೆ ಎಂದು ನಿ ಪಿ 1 ನ್ನು ನನಗೆ ಓದಿ ತಿಳಿಸಿರುವುದಿಲ್ಲ. ಸ.ನಂ. 43 ರಲ್ಲಿ 6 ಎಕರೆ 30 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಅದರಲ್ಲಿ 24 ಗುಂಟೆ ಖರಾಬು ಎಂದರೆ ಸರಿ. ನಿ ಪಿ 7 ರ ಪ್ರಕಾರ ರಾಮಯ್ಯ ಬಿನ್ ಮರಿಲಿಂಗಯ್ಯ ರವರ ಹೆಸರಿನಲ್ಲಿ 3 ಎಕರೆ 8 ಗುಂಟೆ ಜಮೀನಿರುತ್ತದೆ ಎಂದರೆ ಸರಿ. 43/1 ರಲ್ಲಿ ಮುದ್ದಹನುಮಯ್ಯ ಬಿನ್ ಸಂಜೀವೇಗೌಡ ರವರ ಹೆಸರಿನಲ್ಲಿ 1 ಎಕರೆ 38 ಗುಂಟೆ ಇರುತ್ತದೆ ಎಂದರೆ ಸರಿ.

ನನ್ನ ದೊಡ್ಡಪ್ಪನ ಹೆಸರು ಬೈರಯ್ಯ ಎಂದರೆ ಸರಿ. ಅವರು ಮರಿಲಿಂಗಯ್ಯ ರವರ ಮಗ ಎಂದರೆ ಸರಿ. ನಿ ಡಿ 1 ರ ಪ್ರಕಾರ ಒಂದು ಕ್ರಯಪತ್ರವನ್ನು ಆಗಿರುತ್ತದೆ ಅದರ ಪ್ರಕಾರ ಪ್ರತಿವಾದಿ 7 ರವರ ತಾತನಿಗೆ ನಮ್ಮ ತಾತ ಮತ್ತು ಅವರ ಮಕ್ಕಳು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸ.ನಂ. 43/1 ಬಿ ನ್ನು ಮುದ್ದಹನುಮಯ್ಯ ರವರಿಂದ ನಂಜಪ್ಪ ನವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 43/2 ನ್ನು ನಂಜಪ್ಪ ನವರು ಕಪ್ಪಣ್ಣ ನವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸ.ನಂ 43/1, ಎ 43/1 ಬಿ ಮತ್ತು ಸ.ನಂ. 43/2 ಇವುಗಳನ್ನು ಸೇರಿಸಿದರೆ 6 ಎಕರೆ 30 ಗುಂಟೆ ಜಮೀನು ಒಟ್ಟಿಗೆ ಬರುತ್ತದೆ ಎಂದರೆ ಸರಿ. 1948 ರಿಂದಲೇ ನನ್ನ ತಾತನ ಹೆಸರಿನಲ್ಲಿ 6 ಎಕರೆ 30 ಗುಂಟೆ ಇರುವುದಿಲ್ಲವೆಂದರೆ ಸುಳ್ಳು. ಈ ದಿನ ಸರ್ವೇ ನಂ. 43/1 ಎ ರ ಖಾತೆ ನಂಜಪ್ಪ ನವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಈಗ ಖಾತೆಯನ್ನು ಬದಲಾಯಿಸಲಾಗಿದೆ ಎಂದು

ನುಡಿಯುತ್ತಾರೆ. ಸ.ನಂ 43/1, ಎ 43/1 ಬಿ ಮತ್ತು ಸ.ನಂ. 43/2 ಇವುಗಳನ್ನು ನನ್ನ ದಾವೆಯಲ್ಲಿ ಅನೂರ್ಜಿತ ಮಾಡಲು ಎಲ್ಲೂ ಕೇಳಿರುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. ನನಗೆ ಸ.ನಂ. 43/1 ರ ಚೆಕ್ ಬಂದಿ ಗೊತ್ತಿಲ್ಲ. ಪ್ರತಿವಾದಿ 7 ರವರ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ 6 ಮತ್ತು 9 ರವರ ಪರ ಎ ಎಸ್ ಎಸ್ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**